ನಾಯ್ಡು ಅವರ ಕಡೆಯಿಂದ ಬರತಕ್ಕಂಥ ಅಡೆತಡೆಗಳನ್ನು ಯಾವ ರೀತಿ ನಿಭಾಯಿಸುತ್ತೀರಿ ಎನ್ನುವ ಮಾತನ್ನು ತಾವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳಬೇಕೆಂದೂ ಮತ್ತು ತಾವು ಪ್ರಾಮಾಣಿಕವಾದ ಕೆಲಸವನ್ನು ಮಾಡಬೇಕೆಂದು ಹೇಳಿ, ನನಗೆ ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

7 ರಾಷ್ಟ್ರೀಯ ಅಜೆಂಡಾದಲ್ಲಿ ಕಾವೇರಿ ವಿಷಯವನ್ನು ಸೇರಿಸಿರುವುದರ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೇ.

ಉಪಾಧ್ಯಕ್ಷರು:- ಬೇಡ , ಬೇಡ ಮಾನ್ಯ ಶ್ರೀ ರಾಮರೆಡ್ಡಿಯವರು ಮಾತನಾಡಲಿ. ತಾವು ಈ ವಿಷಯವನ್ನು ಮಾತನಾಡಲು ಶುರು ಮಾಡಿದರೆ ಎಲ್ಲರೂ ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಇದು ಬಹಳ ಪ್ರಾಮುಖ್ಯವಾದ ವಿಷಯ. ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿದ್ದಾರೆ. ರಾಷ್ಟ್ರೀಯ ಅಜೆಂಡಾದಲ್ಲಿ ಕಾವೇರಿಯನ್ನು ಸೇರಿಸಿದ್ದಾರೆ ಕಾವೇರಿ ನೀರನ್ನು ಪ್ರತಿ ವರ್ಷ 205 ಟಿಎಂಸಿ ಬಿಡುವ ಬಗ್ಗೆ ರಾಷ್ಟ್ರೀಯ ಅಜೆಂಡಾದಲ್ಲಿ ಸೇರಿದ್ದಾರೆ. ಅದರ ಬಗ್ಗೆ ನಮ್ಮ ಸರ್ಕಾರದ ನಿಲುವು ಏನು?

ಉಪಾಧ್ಯಕ್ಷರು:- ಬೇಡ. ತಾವು ದಯಮಾಡಿ ಕುಳಿತುಕೊಳ್ಳಿ. ಅವರು ಕಮ್ಯುನಿಸ್ಟ್ ಪಕ್ಷದ ನಾಯಕರು.

ಶ್ರೀ ವಾಟಾಳ್ ನಾಗರಾಜ್:- ನಮ್ಮ ಸರ್ಕಾರದ ನಿಲುವು ಏನು? ರಾಷ್ಟ್ರೀಯ ಅಜೆಂಡಾದಲ್ಲಿ ಕಾವೇರಿ ವಿಷಯ ಸೇರಿಸಿದ್ದಾರೆ.

ಉಪಾಧ್ಯಕ್ಷರು:- ಬೇಕಾದ್ದು ಮಾಡಿ. ನಾನು ಏನೂ ಮಾಡಲು ಸಾಧ್ಯ? ತಾವು ಒಬ್ಬರು ಮಾತನಾಡಿದರೆ ಎಲ್ಲರೂ ಮಾತನಾಡುತ್ತಾರೆ. ಸಾಧ್ಯವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಆಯಿತು ನಾನು ಮಾತನಾಡುವುದಿಲ್ಲ ಬಿಡಿ ಸ್ವಾಮಿ ರಾಷ್ಟ್ರೀಯ ಅಜೆಂಡಾದಲ್ಲಿ ಕಾವೇರಿ ವಿಷಯವನ್ನು ಸೇರಿಸಿರುವುದನ್ನು ವಿರೋಧಿಸಿ ನಾನು ಈ ಸಭೆಯಲ್ಲಿ ಧರಣಿ ಮಾಡುತ್ತೇನೆ.

(ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ಕುಳಿತರು).

ಉಪಾಧ್ಯಕ್ಷರು:- ಆಯಿತು, ತಾವು ಧರಣಿ ಮಾಡಿ, ಶ್ರೀರಾಮರೆಡ್ಡಿಯವರೇ ತಾವು ಮಾತನಾಡಿ.

ಶ್ರೀ ಎಂ. ಪಿ. ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಗಂಭೀರವಾದ ವಿಷಯವನ್ನು ಸದನದ ಗಮನಕ್ಕೆ ತಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ನೋಡಿದ್ದಾರೆ. ನಾಳೆ ಉತ್ತರ ಕೊಡುವಾಗ ಇದಕ್ಕೆ ನಿರ್ದಿಷ್ಟವಾಗಿ ಒಂದು ಉತ್ತರವನ್ನು ಕೊಡುತ್ತೇವೆ ತಾವು ಧರಣಿ ಮಾಡಬೇಡಿ ಮಾನ್ಯ. ಮುಖ್ಯಮಂತ್ರಿಗಳು ನಾಳೆ ಉತ್ತರ ಕೊಡುತ್ತಾರೆ.

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ತಮ್ಮ ಸ್ಥಳಕ್ಕೆ ಬಂದರೆ ನಾನು ಉತ್ತರ ಕೊಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ತಮ್ಮ ಧರಣಿಯನ್ನು ಕೈಬಿಟ್ಟು ಸ್ಥಳಕ್ಕೆ ಬಂದು ಕುಳಿತುಕೊಂಡರು)

+ಶ್ರೀ ಕೆ.ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು):- ಮಾನ್ಯ ಅಧ್ಯಕ್ಷರೇ, ಇವತ್ತು ನಾವು ಪತ್ರಿಕೆಗಳಲ್ಲಿ ಓದಿದ ಪ್ರಕಾರ ಅಥವಾ ಮಾಧ್ಯಮಗಳಲ್ಲಿ ತಿಳಿದುಕೊಂಡ ಪ್ರಕಾರ ಶ್ರೀಮತಿ ಜಯಲಲಿತಾ ಅವರು ಈ ಕಾವೇರಿ ವಿಚಾರದಲ್ಲಿ 1991ರಲ್ಲಿ ಮಧ್ಯಂತರ ಆಜ್ಞೆ ಏನು ಹೊರಬಿದ್ದಿದೆ ಆ ಆಜ್ಞೆಯನ್ನು ಜಾರಿಗೆ ಕೊಡಬೇಕು ಎನ್ನುವಂತದ್ದು ಕೂಡ ಅವರ ಷರತ್ತುಗಳಲ್ಲಿ ಒಂದು ಎನ್ನುವುದನ್ನು ನಾವೆಲ್ಲಾ ಪತ್ರಿಕೆಗಳಲ್ಲಿ ಓದಿದ್ದೇವೆ. ಇದರ ಮಧ್ಯೆ ನಡೆದಿರತಕ್ಕಂಥಾ ವಿಚಾರ ಏನೆಂದರೆ ಈ ಹಿಂದೆ ಮಾನ್ಯ ಗುಜ್ರಾಲ್ ಅವರು ಪ್ರಧಾನ ಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಸುಪ್ರೀಂ ಕೋರ್ಟಿನ ಆದೇಶದ ಮೇಲೆ ಎಲ್ಲಾ ರಾಜ್ಯಗಳ ಒಪ್ಪಿಗೆಯನ್ನು ಪಡೆದುಕೊಂಡು ಪ್ರಾಧಿಕಾರ ಮಾಡುವ ಬಗ್ಗೆ ಡ್ರಾಫ್ಟ್ ಸ್ಕೀಮ್ ಮಾಡುವ ಬಗ್ಗೆ ನಮ್ಮ ರಾಜ್ಯಗಳ ಒಪ್ಪಿಗೆಯನ್ನು ಕೇಳಬೇಕು ಎಂದು ಹೇಳಿ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಆದೇಶ ಕೊಟ್ಟಿತ್ತು. ಅದೇ ರೀತಿ, ಕೇಂದ್ರ ಸರ್ಕಾರ ಆದೇಶದ ಪ್ರಕಾರ ನಮ್ಮ ರಾಜ್ಯಗಳಿಗೆ ಡ್ರಾಫ್ಟ್ ನೋಟಿಫಿಕೇಷನ್ ಬಂದಿತ್ತು. ಆ ಡ್ರಾಫ್ಟ್ ನೋಟಿಫಿಕೇಷನ್ ಅನ್ನು ಕೇಂದ್ರ ಸರ್ಕಾರದ ನೀರಾವರಿ ಸಚಿವರು ನಾಲ್ಕು ರಾಜ್ಯಗಳವರನ್ನು ಚರ್ಚೆ ಮಾಡಿದಾಗ ನಾವು ಆ ಪ್ರಾಧಿಕಾರಕ್ಕೆ ನಮ್ಮ ರಾಜ್ಯ ಸರ್ಕಾರದ ಪರವಾಗಿ ತೀವ್ರವಾದ ವಿರೋಧವನ್ನು ವ್ಯಕ್ತ ಮಾಡಿದ್ದೇವೆ. ತದನಂತರ ನಮ್ಮ ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ನಮ್ಮ ರಾಜ್ಯದ ನಿಲುವನ್ನು ಈಗ ಇರತಕ್ಕಂಥ ಪ್ರಧಾನ ಮಂತ್ರಿಗಳಿಗೆ ಸ್ಪಷ್ಟವಾಗಿ ತಿಳಿಸಿ, ಇದು ಕಾವೇರಿ ಪ್ರಾಧಿಕಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಇದಕ್ಕೆ ಒಂದು ಮಾನಿಟರಿಂಗ್ ಕಮಿಟಿ ಸಾಕು, 205 ಟಿಎಂಸಿ ನೀರು ಎಂದು ಏನು ಇದೆ, ಅದನ್ನು ಅವರು ಕೇಳಿದಾಗ ನಮ್ಮ ಹತ್ತಿರ ಲಭ್ಯತೆ ಇದ್ದಾಗ ನಾವು ಅವರಿಗೆ ಕೊಡುತ್ತಾ ಬಂದಿದ್ದೇವೆ. ಪ್ರಾಧಿಕಾರದ ಅವಶ್ಯಕತೆ ಇಲ್ಲ ಎನ್ನುವಂತಹ ಮಾತನ್ನು ನಮ್ಮ ಮುಖ್ಯಮಂತ್ರಿಗಳಾದ ಶ್ರೀ ಜೆಎಚ್ ಪಟೇಲ್ ಅವರ ನಾಯಕತ್ವದಲ್ಲಿ ಪ್ರಧಾನ ಮಂತ್ರಿಗಳಿಗೆ ತಿಳಿಸಿದ್ದಾರೆ ನಂತರ ನಾವುಗಳೂ ಸಹ ಹೇಳಿದ್ದೇವೆ, ಈ ವಿಚಾರದಲ್ಲಿ ಸ್ಪಷ್ಟವಾಗಿ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ನೀರು ಕರೆಯಬೇಕು ಎಂದು ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ತಂದಿದೇವೆ. ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟಿಗೆ ಡ್ರಾಫ್ಟ್ ನೋಟಿಫಿಕೇಷನ್ ಬಗ್ಗೆ ಯಾವುದೇ ಅಭಿಪ್ರಾಯವನ್ನು ಇನ್ನೂ ಕೊಟ್ಟಿಲ್ಲ ಈ ತಿಂಗಳು 31ನೇ ತಾರೀಖಿನ ದಿವಸ ಸುಪ್ರೀಂ ಕೋರ್ಟಿನಲ್ಲಿ ಹಿಯರಿಂಗ್‌ಗೆ ಬರುತ್ತಿದೆ. ಅಷ್ಟರಲ್ಲಿ ಪ್ರಧಾನ ಮಂತ್ರಿಗಳು, ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಕರೆಯಬೇಕು ಎನ್ನುವುದಕ್ಕೆ ಕೇಂದ್ರ ಸರ್ಕಾರದ ನೀರಾವರಿ ಮಂತ್ರಿಗಳು ಸಲಹೆಯನ್ನು ಕೊಟ್ಟಿದ್ದಾರೆ. ಈ ಮಧ್ಯೆ, ಈ ಒಂದು ಹೋರಾಟವನ್ನು ಜಯಲಲಿತಾ ಅವರು ಸೃಷ್ಟಿ ಮಾಡಿದ್ದಾರೆ. ನಮ್ಮ ಸರ್ಕಾರದ ನಿಲುವು ಏನು ಎಂದು ಹೇಳಿದರೆ, ಇವತ್ತು ಆ ಪ್ರಾಧಿಕಾರದ ರಚನೆಗೆ ನಮ್ಮ ಒಪ್ಪಿಗೆ ಇಲ್ಲ. ಅದಕ್ಕೆ ಒಂದು ಮಾನಿಟರಿಂಗ್ ಸೆಲ್ ಸಾಕು. ಇದನ್ನು ಮೂರು ರಾಜ್ಯಗಳು ಪರಸ್ಪರ ಹೊಂದಾಣಿಕೆಯಿಂದ ಸುಪ್ರೀಂ ಕೋರ್ಟಿಗೆ ತಿಳಿಸುವುದಕ್ಕಿಂತ ಮುಂಚಿತವಾಗಿ ಕೇಂದ್ರ ಸರ್ಕಾರ ಮುಖ್ಯಮಂತ್ರಿಗಳ ಸಭೆಯನ್ನು ಕರೆಯಬೇಕು ಎನ್ನಕ್ಕಂಥಾದ್ದು ರಾಷ್ಟ್ರೀಯ ಅಜೆಂಡಾದಲ್ಲಿ ಸೇರಿಸಿ ಜಾರಿಗೆ ತರುವುದಾದರೆ, ಅದು ಸಬ್ ಜುಡೀಸ್ ಆಗುತ್ತದೆ. ಏಕೆಂದರೆ ಈ ವಿಷಯದ ಇವತ್ತು ಸುಪ್ರೀಂ ಕೋರ್ಟಿನಲ್ಲಿರುವ

ಪ್ರಯುಕ್ತ, ಸುಪ್ರೀಂ ಕೋರ್ಟಿನ ಆದೇಶವನ್ನು ಅವರು ಕೇಂದ್ರ ಸರ್ಕಾರಕ್ಕೆ ಕೊಟ್ಟು 4 ರಾಜ್ಯಗಳ ಪರಸ್ಪರ ಹೊಂದಾಣಿಕೆಯಿಂದ ಈ ಸ್ಕೀಮ್ ಬಗ್ಗೆ ತಿಳಿಸಬೇಕು ಎಂದು ಹೇಳಿ, ಈ ವಿಷಯ ಸುಪ್ರೀಂ ಕೋರ್ಟಿನಲ್ಲಿ ಇರುವುದರಿಂದ ಕೇಂದ್ರ ಸರ್ಕಾರ ಒಂದು ಪಕ್ಷ ಯಾರಿಗಾದರೂ ಮಣಿದು ಅದನ್ನು ರಾಷ್ಟ್ರೀಯ ಅಜೆಂಡಾದಲ್ಲಿ ಸೇರಿಸಿದರೆ ಅದು ಸಬ್ ಜುಡೀಸ್ ಆಗುತ್ತದೆ ಅದನ್ನು ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ ಎಂದು ನನಗೆ ಅನ್ನಿಸುತ್ತದೆ ಹೊಸ ಪ್ರಧಾನ ಮಂತ್ರಿಗಳು ಬಂದ ಕೂಡಲೇ ನಮ್ಮ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಕಾಗದ ಬರೆಯುತ್ತಾರೆ. ಪ್ರಧಾನ ಮಂತ್ರಿಗಳಿಗೆ ಕಾಗದ ಬರೆದು ಕೂಡಲೇ ನಾಲ್ಕು ರಾಜ್ಯಗಳ ಮುಖ್ಯ ಮಂತ್ರಿಗಳ ಸಭೆಯನ್ನು ಕರೆದು ಚರ್ಚೆ ಮಾಡಿ ನಂತರ ತಾವು ಈ ಸ್ಕೀಮ್ ಬಗ್ಗೆ ಚರ್ಚೆ ಮಾಡಿ ಸುಪ್ರೀಂ ಕೋರ್ಟಿಗೆ 31ನೇ ತಾರೀಖು ತಿಳಿಸಬೇಕು ಎನ್ನುವುದಕ್ಕೆ, ಮಾನ್ಯ ಮುಖ್ಯಮಂತ್ರಿಗಳು ಕಾಗದ ಬರೆಯುವುದಕ್ಕೆ ತಯಾರಾಗಿದ್ದಾರೆ. ಜಯಲಲಿತಾ ಅವರು ಹೇಳುವುದಕ್ಕೆ ನಾವು ಯಾರೂ ಸಹ ಒಪ್ಪುವುದಕ್ಕೆ ಆಗುವುದಿಲ್ಲ. ಈ ವಿಷಯ ಸುಪ್ರಿಂ ಕೋರ್ಟಿನಲ್ಲಿದೆ. ಈ ವಿಚಾರವನ್ನು ನಾವು ಕೇಂದ್ರ ಸರ್ಕಾರಕ್ಕೆ ಬರೆದು ತಿಳಿಸುತ್ತೇವೆ ಎನ್ನತಕ್ಕಂಥಾದ್ದು ನಮ್ಮ ಸರ್ಕಾರದ ನಿಲುವು, ಹೊಸ ಸರ್ಕಾರ ಬಂದ ತಕ್ಷಣ ನಮ್ಮ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಕಾಗದ ಬರೆದು ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಕರೆಯಬೇಕು, ಮಾರ್ಚ್ 31ಕ್ಕೆ ಇರತಕ್ಕಂಥ ಇಯರಿಂಗ್‌ಗೆ ತಿಳಿಸಬೇಕೆಂದು ನಾವು ತೀರ್ಮಾನ ಮಾಡಿಕೊಂಡಿದ್ದೇವೆ. ಇದು ನಮ್ಮ ರಾಜ್ಯ ಸರ್ಕಾರದ ನಿಲುವು ಎಂದು ಹೇಳಿ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್ ಅವರಿಗೆ ಮತ್ತು ಈ ಸಭೆಗೆ ತಿಳಿಸಲು ನಾನು ಇಷ್ಟಪಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಉಪಾಧ್ಯಕ್ಷರೇ, ತಾವು ಮುಖ್ಯಮಂತ್ರಿಗಳ ಕಡೆಯಿಂದ ಕಾಗದ ಬರೆಯುವುದು ಒಂದು ಕಡೆ ಆದರೆ ರಾಜಕೀಯವಾಗಿ ಸೃಷ್ಟಿ ಮಾಡಿದಂತಹ ಸಮಸ್ಯೆಗಳಿಗೆ ರಾಜಕೀಯವಾಗಿಯೇ ನಾವು ಉತ್ತರ ಕೊಡಬೇಕಾಗುತ್ತದೆ. ಹೊಸದಾಗಿ ಲೋಕಸಭೆಗೆ ಆಯ್ಕೆಯಾಗಿರತಕ್ಕಂಥ ಸದಸ್ಯರಿಗೆ ಮಾಹಿತಿಯನ್ನು ಕೊಟ್ಟು, ನಮ್ಮ ಸದಸ್ಯರು ಈ ವಿಷಯವನ್ನು ಪಾರ್ಲಿಮೆಂಟ್‌ನಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಈ ವಿಷಯವನ್ನು ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಇದನ್ನೇ ಆಧಾರವಾಗಿಟ್ಟುಕೊಂಡು ನಾವು ಸಾಕಷ್ಟು ಹೋರಾಟ ಮಾಡುವುದಕ್ಕೆ ಅವಕಾಶ ಇದೆ. ನಾನು ಆದಕ್ಕೋಸ್ಕರವೇ ಇಲ್ಲಿ ಒಂದು ಅಪೆಕ್ಸ್ ಬಾಡಿ ಮಾಡಿ ಎಂದು ಸಲಹೆಕೊಟ್ಟಿದ್ದು. ನಮ್ಮ ನೀರಾವರಿ ಯೋಜನೆಗಳು ಯಾವ ಯಾವ ಹಂತದಲ್ಲಿವೆ, ಅವುಗಳನ್ನು ಕ್ಲಿಯರೆನ್ಸ್ ಮಾಡುವುದಕ್ಕೋಸ್ಕರ ಅಲ್ಲಿ ಒಂದು ಸೆಲ್ ಮಾಡುವಂತಹ ಕೆಲಸವನ್ನು ಮಾಡಿದರೆ ಲೋಕಸಭಾ ಸದಸ್ಯರಿಗೂ ಕೂಡ ಮಾಹಿತಿಯನ್ನು ಕೊಟ್ಟಂತೆ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಪಕ್ಷಾತೀತವಾಗಿ ಇಡೀ ರಾಜ್ಯ ಇದನ್ನು ವಿರೋಧ ಮಾಡಬೇಕು. ಯಾವುದೇ ಭೇದಭಾವನೆ ಇಲ್ಲದೆ ಈ ವಿಚಾರ ರಾಷ್ಟ್ರೀಯ ಅಜೆಂಡಾದಲ್ಲಿ ಅಥವಾ ಎಲ್ಲೂ ಕೂಡ ಬರಬಾರದು. ರಾಜ್ಯದ ಹಿತವನ್ನು ಕಾಪಾಡುವುದರಲ್ಲಿ ನಾವೆಲ್ಲ ಒಟ್ಟಾಗಿ ಇರಬೇಕು ಎನ್ನುವುದು ನಮ್ಮ ತೀರ್ಮಾನ.

ಶ್ರೀ ಕೆ ಎನ್. ನಾಗೇಗೌಡ:- ಒಂದು ಮಾತನ್ನು ನಾನು ಈ ಸಭೆಯಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಓ ಎಸ್ 1:92ರ ಸೂಟ್‌ನಲ್ಲಿ ಈ ಮಧ್ಯೆಂತರ ಆಜ್ಞೆಯನ್ನು ಜಾರಿಗೆ ತರಬೇಕು ಎಂದು ಸುಪ್ರಿಂ ಕೋರ್ಟಿಗೆ ಹೋದವರೇ ಶ್ರೀಮತಿ ಜಯಲಲಿತಾ ಅವರು. ಸುಪ್ರಿಂ ಕೋರ್ಟಿನಲ್ಲಿ ಕೇಸ್ ಇರುವಾಗ ನ್ಯಾಷನಲ್ ಅಜೆಂಡಾದಲ್ಲಿ ಅದು ಬಂದರೆ, ಆಗ ಅದು ಸಬ್ ಜ್ಯುಡೀಸ್ ಆಗುತ್ತದೆ. ಆದ್ದರಿಂದ ಅದನ್ನು ತರುವುದಕ್ಕೆ ಸಾಧ್ಯವೇ ಇಲ್ಲ. ರಾಜಕೀಯವಾಗಿ ನಾವು ಯಾವುದೇ ಹೋರಾಟ ಮಾಡುವುದಕ್ಕೆ ಸಿದ್ದರಿದೇವೆ. ಈ ರಾಜ್ಯದ ಹಿತವನ್ನು ಉಳಿಸುವುದಕ್ಕೆ ನಾವು ಪಕ್ಷಾತೀತವಾಗಿ ತಯಾರಾಗಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಉಪಾಧ್ಯಕ್ಷರೇ, ಸಬ್ ಜುಡೀಸ್ ಹೇಗೆ ಆಗುತ್ತದೆ? ಇದಕ್ಕೂ ಅದಕ್ಕೂ ಏನು ಸಂಬಂಧ? ಒಂದು ಸರ್ಕಾರ ಕೈಗೊಳ್ಳಬೇಕಾದಂತಹ ತಾತ್ವಿಕ ತೀರ್ಮಾನ ಇದು. ಸುಪ್ರೀಂ ಕೋರ್ಟಿನಲ್ಲಿ ಇರತಕ್ಕಂಥಾದ್ದಕ್ಕೆ ಕಾನೂನು ವ್ಯಾಪ್ತಿಯಲ್ಲಿ ಏನು ಇಂಟರ್‌ಪ್ರಿಟ್ ಮಾಡಬೇಕೋ ಅದನ್ನು ಅವರು ಮಾಡುತ್ತಾರೆ. ಅದಕ್ಕೂ ಏನು ಸಂಬಂಧ?

ಶ್ರೀ ಕೆ. ಎನ್. ನಾಗೇಗೌಡ:- ಶ್ರೀಮತಿ ಜಯಲಲಿತಾ ಅವರು ಇಂಟೀರಿಯಮ್ ಆರ್ಡರ್‌ನ್ನು ಇಂಪ್ಲಿಮೆಂಟ್ ಮಾಡಬೇಕೆಂದು ಕೇಳಿದ್ದಾರೆ. ಇಂಟಿರಿಯಮ್ ಆರ್ಡರ್‌ನ್ನು ಇಂಪ್ಲಿಮೆಂಟ್ ಮಾಡಿಲ್ಲವೆಂದು 1992 ರಲ್ಲಿ ಶ್ರೀಮತಿ ಜಯಲಲಿತಾರವರೇ ಸುಪ್ರಿಮ್ ಕೋರ್ಟಿಗೆ ಹೋಗಿದ್ದಾರೆ. ಆ ಓ.ಎಸ್. 1 ರ ಮೇರೆ, ಇಂಟೀರಿಯಮ್ ಆರ್ಡರನ್ನು ಇಂಪ್ಲಿಮೆಂಟ್ ಮಾಡುವುದಕ್ಕೋಸ್ಕರ ಸಂಬಂಧಪಟ್ಟ ನಾಲ್ಕು ರಾಜ್ಯಗಳವರ ಅಭಿಪ್ರಾಯ ತೆಗೆದುಕೊಂಡು ನಮಗೆ ತಿಳಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಸುಪ್ರೀಮ್ ಕೋರ್ಟ್ ಡೈರಕ್ಟ್ ಮಾಡಿದೆ. ಈಗ ಯೂನಿಯನ್ ಗೌರ್ನಮೆಂಟ್, ನಮ್ಮನ್ನೆಲ್ಲಾ ಕರೆದು ನೆಗೋಷಿಯೇಟ್ ಮಾಡುವುದಕ್ಕೆ ಪ್ರಾರಂಭ ಮಾಡಿದೆ. ಆದುದರಿಂದ, ಈ ಬಗ್ಗೆ ರಾಜ್ಯ ಸರ್ಕಾರಗಳಿಗೆ ಮತ್ತು ಸುಪ್ರೀಮ್ ಕೋರ್ಟ್‌ಗೆ ತಿಳಿಸದೆ, ಗೆಜೆಟ್‌ನಲ್ಲಿ ನೋಟೀಫಿಕೇಷನ್ ಮಾಡುವುದಕ್ಕೆ ಹೋದರೆ ಅದು ಸಬ್‌ಜ್ಯುಡೀಸ್ ಆಗುತ್ತದೆಂದು ನಮ್ಮ ಸರ್ಕಾರದ ವಕೀಲರು ಅಭಿಪ್ರಾಯವಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ:- ರಾಜಕೀಯವಾಗಿ ಯಾವುದೇ ತೀರ್ಮಾನ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಅಧಿಕಾರ ಇದೆ.

ಶ್ರೀ ಕೆ.ಎನ್. ನಾಗೇಗೌಡ:- ಇದರ ಬಗ್ಗೆ ನಾಲ್ಕು ರಾಜ್ಯಗಳ ಅಭಿಪ್ರಾಯವನ್ನು ಪಡೆದು ಅದನ್ನು ಸುಪ್ರೀಮ್ ಕೋರ್ಟ್‌ಗೆ ತಿಳಿಸದೆ ಗೆಜೆಟ್ ನೋಟಿಫಿಕೇಷನ್ ಮಾಡುವುದಕ್ಕೆ ಹೋದರೆ ಅದು ಸಬ್‌ಜ್ಯೂಡೀಸ್ ಆಗುತ್ತದೆಂದು ಲಾ- ತಜ್ಞರ ಅಭಿಪ್ರಾಯವಾಗಿರುತ್ತದೆ ಅದಕ್ಕೂ ಮೀರಿ ನಡೆದರೆ ನಾವು ಹೋರಾಡುವುದಕ್ಕೆ ಸಿದ್ದವಾಗಿದ್ದೇವೆ. 1991 ರಿಂದ ಆಗತಕ್ಕಂಥ ಮಾಡಿಫಿಕೇಷನ್ ಆರ್ಡರ್ಸ್ ಮತ್ತು ಸುಪ್ರೀಮ್ ಕೋರ್ಟ್‌ನಲ್ಲಿ ಇದುವರೆವಿಗೆ ಏನಾಗಿದೆ ಎಂಬ ಬಗ್ಗೆ ಎಲ್ಲಾ ಡೀಟೈಲ್ಸ್‌ನ್ನು ನಮ್ಮ ರಾಜ್ಯ ಎಂ.ಪಿ., ಗಳಿಗೆ ಒದಗಿಸಿಕೊಡುತ್ತೇವೆ. ಈ ವಿಷಯದಲ್ಲಿ ಪಕ್ಷಾತೀತವಾಗಿ ಹೋರಾಟ ಮಾಡಲಿಕ್ಕೆ ನಾವು ಸಿದ್ಧವಾಗಿದ್ದೇವೆ. ನಾವು ಕೈ ಕಟ್ಟಿಕೊಂಡು ಕುಳಿತುಕೊಳ್ಳುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೇ, ಶ್ರೀಮತಿ ಜಯಲಲಿತಾರವರು ಹಾಕಿರತಕ್ಕಂಥ ಕಂಡೀಷನ್‌ಗಳ ಬಗ್ಗೆ ಮಾನ್ಯ ವಾಜಪೇಯಿಯವರು ಸ್ಪಷ್ಟವಾಗಿ ಹೇಳಿದ್ದಾರೆ ಕಾವೇರಿ ವಿಚಾರದ ಬಗ್ಗೆ ಯಾವುದೇ ಕಾರಣಕ್ಕೂ ಕರ್ನಾಟಕ ರಾಜ್ಯದ ಹಿತವನ್ನು ಕಡೆಗಣಿಸತಕ್ಕಂಥ ಪ್ರಶ್ನೆ ಯಾವ ಸಂದರ್ಭದಲ್ಲೂ ಬರುವುದಿಲ್ಲ. ಇದರಲ್ಲಿ ಯಾರೂ ರಾಜಕೀಯ ಮಾಡತಕ್ಕಂಥ ಪ್ರಶ್ನೆ ಬರುವುದಿಲ್ಲ. ರಾಷ್ಟ್ರೀಯ ಜಲ ನೀತಿಯೇ ನಮ್ಮ ದೇಶದ ನೀರಿನ ಸಮಸ್ಯೆಯನ್ನು ಬಗೆಹರಿಸುತ್ತದೆ ಎನ್ನುವುದೇ ಬಿ.ಜೆ.ಪಿ., ಯ ರಾಷ್ಟ್ರೀಯ ಸಂವಿಧಾನದಲ್ಲೇ ನಾವು ಸ್ಪಷ್ಟ ಮಾಡಿಕೊಂಡಿದ್ದೇವೆ.

8. ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟ ವಾದ ನಿರ್ಣಯದ ಮೇಲಿನ ಚರ್ಚೆ:-

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- (ಬಾಗೇಪಲ್ಲಿ): ಸನ್ಮಾನ್ಯ ಅಧ್ಯಕ್ಷರೆ, ಈ ಸರ್ಕಾರ ಬಂದ ಮೇಲೆ ನಾಲ್ಕನೇ ಬಾರಿಗೆ ರಾಜ್ಯಾಪಾಲರ ಭಾಷಣವನ್ನು ಸದನಕ್ಕೆ ಕೊಟ್ಟಿದ್ದಾರೆ. ರಾಜ್ಯಪಾಲರ ಭಾಷಣ ಅಂಧರೆ; ಸರ್ಕಾರ ರಾಜ್ಯಕ್ಕಾಗಿ ಏನು ಕಾರ್ಯಕ್ರಮಗಳನ್ನು ಇಟ್ಟಿದೆ? ಯಾವ ಗುರಿಯಲ್ಲಿ ಸರ್ಕಾರ ರಾಜ್ಯಕ್ಕಾಗಿ ಏನು ಕಾರ್ಯಕ್ರಮದಲ್ಲಿರತಕ್ಕಂಥ ಸಮಸ್ಯೆಗಳೇನು? ಆ ಸಮಸ್ಯೆಗಜನ್ನು ಪರಿಹಾರ ಮಾಡಲಿಕ್ಕೆ ಏನು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬ ಬಗ್ಗೆ ಸರ್ಕಾರದ ಧೋರಣೆ ಹೇಳಿಕೆಯಾಗಿ ರಾಜ್ಯಪಾಲರ ಭಾಷಣ ಇರಬೇಕಾಗುತ್ತದೆಂದು ನಾವೆಲ್ಲರೂ ತಿಳಿದುಕೊಂಡಿರತಕ್ಕಂಥ ವಿಷಯ. ಆ ದಿಕ್ಕಿನಲ್ಲಿ ಇದನ್ನು ಆಲೋಚನೆ ಮಾಡಿದರೆ, ಈ ರಾಜ್ಯಪಾಲರ ಭಾಷಣದಲ್ಲಿರತಕ್ಕಂಥ ವಿಷಯವನ್ನು ಚುನಾವಣೆಗೆ ಮುಂಚಿತವಾಗಿ ಕರ್ನಾಟಕ ರಾಜ್ಯದ ಜನತೆಗೆ ಹೇಳಿದ್ದರೆ ಅವರ ಪಕ್ಷಕ್ಕೆ ಏನಾದರೂ ಪ್ರಯೋಜನವಾಗುತ್ತಿತ್ತೆಂದು ನಾನು ತಿಳಿದು ಕೊಂಡಿದ್ದೇನೆ. ಅಂದರೆ, ಹಿಂದೆ ನಾವು ಏನು ಮಾಡಿದ್ದೇವೆಂದು ಹೇಳಿದ್ದಾರೆಯೇ ಹೊರತು ಮುಂದೆ ನಾವು ಏನು ಮಾಡುತ್ತೇವೆ ಎನ್ನುವ ಬಗ್ಗೆ ಯಾವ ಪ್ರಸ್ತಾಪವೂ ಇದರಲ್ಲಿ ಇಲ್ಲ. ಆದುದರಿಂದ, ಮುಂದೆ ಬರತಕ್ಕಂಥ ದಿನಗಳಲ್ಲಿ ರಾಜ್ಯದ ಸಮಸ್ಯೆಗಳನ್ನು ಮತ್ತು ಜನರ ಸಮಸ್ಯೆಗಳನ್ನು ಪರಿಹಾರ ಮಾಡಲಿಕ್ಕೆ ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುತ್ತದೆ ಎನ್ನುವ ಅಂಶವನ್ನು ಸರ್ಕಾರ ಸ್ಪಷ್ಟಪಡಿಸಬೇಕಾಗುತ್ತದೆ. ಈ ರಾಜ್ಯದಲ್ಲಿ ಬಡತನ, ನಿರುದ್ಯೋಗ, ಅನಕ್ಷರತೆ, ಕೃಷಿ ನೀರಾವರಿ, ಕೈಗಾರಿಕೆಗಳ ಸಮಸ್ಯೆ ವಿಪರೀತ ಇದೆ. ಈ ಸಮಸ್ಯೆಗಳನ್ನು ಯಾವ ರೀತಿ ಪರಿಹಾರ ಮಾಡಲಾಗುತ್ತದೆ ಎನ್ನುವ ಬಗ್ಗೆ ಸರ್ಕಾರ ಇದರಲ್ಲಿ ಹೇಳದೇ ಇರುವುದರಿಂದ ಮುಂದಿನ ಭವಿಷ್ಯದಲ್ಲಿ ಏನು ಗುರಿ ಎಂಬ ಬಗ್ಗೆ ಯಾವುದೇ ಸ್ಪಷ್ಟತೆ ಈ ಸರ್ಕಾರದಲ್ಲಿ ಇಲ್ಲ ಎನ್ನುವ ಅಭಿಪ್ರಾಯಕ್ಕೆ ನಾನು ಬರಬೇಕಾಗುತ್ತದೆ. ಈ ರಾಜ್ಯಪಾಲರ ಭಾಷಣವು, ಪ್ರತಿ ವರ್ಷ ಮಾಡತಕ್ಕಂಥ ಶ್ರಾದ್ದದ ರೀತಿಯಲ್ಲಿ ಆಗುತ್ತಿದೆಯೋ ಏನೋ ಎಂದು ನನ್ನ ಅನುಮಾನ. ಈ ಭಾಷಣಕ್ಕೆ ಇರತಕ್ಕಂಥ ಪಾವಿತ್ರ್ಯತೆಯನ್ನು ಮರೆತು, ಶಾಸ್ರೋಕ್ತವಾಗಿ ಮಾಡಲೇ ಬೇಕಾದ ಶ್ರಾದ್ಧ ರೀತಿಯಲ್ಲಿ ಪ್ರತಿ ವರ್ಷ ಮಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ ಈ ಭಾಷಣದಲ್ಲಿ ಹೇಳಿರತಕ್ಕಂಥ ಅಂಶಗಳನ್ನು ನಾವು ಒಪ್ಪಿಕೊಳ್ಳಲಿಕ್ಕೂ ಆಗುವುದಿಲ್ಲ, ವಿರೋಧ ಮಾಡಲಿಕ್ಕೂ ಆಗುವುದಿಲ್ಲ. ಭಾಷಣದ ಪ್ರಾರಂಭದಲ್ಲಿ ಚುನಾವಣೆಗಳ ಬಗ್ಗೆ ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ನನ್ನ ಅಭಿಪ್ರಾಯದ ಪ್ರಕಾರ ಈ ದೇಶದಲ್ಲಿರತಕ್ಕಂಥ ಎಲ್ಲಾ ರಾಜಕೀಯ ಪಕ್ಷಗಳು ಚುನಾವಣೆಯ ವ್ಯವಸ್ಥೆಯನ್ನೇ ಕೆಡಿಸಿಬಿಟ್ಟಿವೆ. ಇದು ಎಷ್ಟಮಟ್ಟಿಗೆ ಕೆಟ್ಟಿವೆ ಎಂದರೆ, ಲೋಕಸಭಾ ಚುನಾವಣೆ